ಪಾತ್ರದಲ್ಲಿ ಮಿಂಚಿ ಬೆಳಗಾಗುವಷ್ಟರಲ್ಲಿ ಜನರ ಕಣ್ಮಣಿಯಾದಳು. ಸೆಟ್‌ನಲ್ಲಿ, "ಲೇ ನಾಗೂ..." ಎನ್ನುತ್ತಿದ್ದವರೆಲ್ಲ "ಮೇಡಮ್" ಎನ್ನತೊಡಗಿದರು ಆರ್ಮುಗಂನ ಹೊರತಾಗಿ. ಆಂಜನಪ್ಪ ನೋಟಿನ ಕಂತೆಯನ್ನೇ ಎಣಿಸಿಕೊಂಡ. ನಗರದ ಹೊರವಲಯದಲ್ಲಿ ಐಷಾರಾಮಿ ಮನೆ ಬಾಡಿಗೆಗೆ ಪಡೆದು, ಕಾರು ಕೊಂಡು ಸಂಭ್ರಮಿಸಿದ. ಅವನ ಜಾತಕ ಬದಲಾಗಿ ಐಶ್ವರ್ಯ ಅರಸಿಕೊಂಡು ಬಂದಿತ್ತು.

ಹೊಸ ಚಿತ್ರಕ್ಕೆ ಸಹಿ ಹಾಕಲು ಆರ್ಮುಗಂ ಸೌದಾಮಿನಿಗೆ ಕಾರು ಕಳುಹಿಸಿದ. ನಿರ್ಮಾಪಕರ ಜೊತೆ ಸುಗ್ರಾಸ ಭೋಜನವಾಯಿತು. ಸಂಭಾವನೆ ದುಪ್ಪಟ್ಟಾಗಿತ್ತು. ಕಾಶ್ಮೀರದಲ್ಲಿ ಶೂಟಿಂಗ್ ಎಂದೆಲ್ಲ ಕೇಳಿಸಿಕೊಳ್ಳುತ್ತಿದ್ದಂತೆ ನಶೆ ಆವರಿಸಿತ್ತು. ಮುಂದೇನಾಯಿತೋ ತಿಳಿಯಲಿಲ್ಲ. ಕಾರು ಅವಳನ್ನು ಮನೆಗೆ ಬಿಡುವಾಗ ಅವಳು ಪತಿತೆಯಾಗಿದ್ದಳು. ಅವಳ ಸರ್ವಸ್ವವೂ ಲೂಟಿಯಾಗಿತ್ತು. 'ಗೊಳೊ' ಎಂದು ಅಳುತ್ತ ಬಂದು ಮಾಂಕಾಳಮ್ಮನಿಗೆ ತೆಕ್ಕೆ ಬಿದ್ದಳು. "ನನಗೆ ಈ ಕಸುಬೇ ಬೇಡ. ಎಲ್ಲಾದ್ರೂ ದೂರ ಒಂಟೋಯ್ತೀನಿ" ಎಂದು ಕಣ್ಣೊರೆಸಿಕೊಂಡಳು. "ಎಲ್ಲಿ ಹೋದ್ರೂ ಈಗ ಜನ ನಿನ್ನ ಗುರುತಿಸ್ತಾರೆ ಕನವ್ವ. ಬಿಡಲ್ಲ. ನಮಗೂ ಶಾನೆ ಬೇಜಾರಾಯ್ತದೆ. ಆದರೆ ಈ ಫೀಲ್ಡಿನಲ್ಲಿ ಇದೆಲ್ಲ ಕಾಮನ್ ಕಣೆ ನಾಗೂ" ಎಂದು ಸಂತೈಸಿದ ಆಂಜನಪ್ಪ. ಮಾಂಕಾಳಮ್ಮ, "ಬರೀ ಪವಿತ್ರವಾಗೇ ಇರ್ತೀನಿ ಅನ್ನೋದಾದ್ರೆ ಜೀವನವೆಲ್ಲ ಲೋಟ ತೊಳ್ಕೊಂಡೇ ಇರಬೇಕಾಯ್ತದೆ" ಎಂದಳು ಮೆತ್ತಗೆ. ಅಚ್ಚರಿಯಿಂದ ಕಣ್ಣರಳಿಸಿದ ನಾಗುವಿಗೆ ಆಘಾತವಾಗಿತ್ತು. ಹಾಗಾದರೆ ಇವರಿಗೆ ಇದೆಲ್ಲ ಮೊದಲೇ ಗೊತ್ತಿತ್ತೇ? ಬೇಕೆಂದೇ ತನ್ನನ್ನು ಬೆಂಕಿಗೆ ನೂಕಿದರೆ? ಚಿನ್ನದ ಮೊಟ್ಟೆ ಇಡುವ ಕೋಳಿ ಯಾರಿಗೆ ಬೇಡ? "ಈಗ ಅದನ್ನೆಲ್ಲಾ ಮರ್ತುಬಿಡವ್ವಾ. ನಾಳೆ ಶೂಟಿಂಗ್ ಶುರುವಾಗತ್ಯೆತೆ. ರೆಸ್ಟ್ ಮಾಡು" ಎಂದು ಕಳಿಸಿದಳು ಮಾಂಕಾಳಮ್ಮ. ಮೊದಲ ಬಾರಿಗೆ ಅತ್ತೆಮಾವನ ಮೇಲೆ ಹೇಸಿಗೆ ಮೂಡಿತ್ತು. ಅವ್ವಅಪ್ಪನನ್ನು ನೆನೆದು ಬಿಕ್ಕಳಿಸಿದಳು. ಎರಡು ವರ್ಷ ಕಳೆದರೂ ಬಾರದ ಪ್ರಕಾಶನಿಗೆ ಹಿಡಿಶಾಪ ಹಾಕಿದಳು. ಶವರ್‌ನ ಕೆಳಗೆ ಒಂದು ಗಂಟೆ ನೆನೆದರೂ ಮನದ ಕೊಳೆ ಹೋಗಲಿಲ್ಲ. ನಿರಾಧಾರವಾಗಿ ನಿಂತಂತಾಗಿತ್ತು. ಓಡಿ ಹೋಗುವದಾದರೂ ಎಲ್ಲಿಗೆ? ಸುಖದ ಜೊತೆ ದುಃಖ ಉಚಿತವಾಗಿ ಬಂದಂತೆ ಬಂದಿಳಿದಿತ್ತು ವಿಧಿ.

ಮರುದಿನ ಆರ್ಮುಗಂನ ಮುಖ ನೋಡಲು ಅಹಸ್ಯವಾದರೂ ಗತ್ಯಂತರವಿರಲಿಲ್ಲ. ಕ್ರಮೇಣ ಅಭ್ಯಾಸವಾಯಿತು. ಸಿನಿಮಾಗಳು ಒಂದರ ಮೇಲೊಂದು ಜಯಭೇರಿ ಬಾರಿಸುತ್ತಿದ್ದಂತೆ ಅವಳ ಖ್ಯಾತಿ ಉತ್ತುಂಗಕ್ಕೇರಿತು. ಅವಳು ಕಂಡಲ್ಲಿ ಜನ ಮುತ್ತಿಕೊಳ್ಳುತ್ತಿದ್ದರು. ಬೀದಿಯ ಮೇಲೆ ಕಾಲಿಡುವಂತಿಲ್ಲ. ಒಬ್ಬಳೇ ಎಲ್ಲಿಗೂ ಹೋಗುವಂತಿಲ್ಲ. ಸದಾ ಜೊತೆಯಲ್ಲಿ ಮಾಂಕಾಳಮ್ಮ, ಆಂಜನಪ್ಪ, ಅವರ ಚೇಲಾಗಳು ಇದ್ದೇ ಇರುತ್ತಿದ್ದರು. ದುಡ್ಡಿನ ವ್ಯವಹಾರವೆಲ್ಲ ಅವರದೇ. ಬಿಡಿಕಾಸೂ ಕೈಲಿರುತ್ತಿರಲಿಲ್ಲ. ಅವಳೀಗ ಚಿನ್ನದ ಪಂಜರದಲ್ಲಿ ಬಂದಿ. ಅವಳು ಕೇಳಿದ ಸ್ವಾತಂತ್ರ್ಯವೊಂದನ್ನು ಬಿಟ್ಟು ಬೇರೆ ಐಷಾರಾಮಿ ವಸ್ತುಗಳೆಲ್ಲ ಅವಳ ಅಡಿಗಳಲ್ಲಿ ಬಂದು ಬೀಳುತ್ತಿದ್ದವು. ಅವಳ ಖ್ಯಾತಿ, ಸೌಂದರ್ಯ ನಿರ್ಮಾಪಕರನ್ನು, ಉದ್ಯಮಿಗಳನ್ನು, ರಾಜಕಾರಣಿಗಳನ್ನು ಓಲೈಸಲು ಬಳಕೆಯಾಗತೊಡಗಿದತು. ಬೆಳ್ಳಿತೆರೆಯ ಬದುಕು, ಮುಖವಾಡವನ್ನೇ ಆರಾಧಿಸುವ ಜಗತ್ತು, ಅಂತರ್ಯವನ್ನರಿಯಲಿಚ್ಛಿಸದ ಜನ, ಕೈಬಿಟ್ಟ ಇನಿಯ, ತನ್ನವರಾರೂ ಇಲ್ಲದ ಜೀವನ... ನಿಧಾನವಾಗಿ ಏನೂ ಬೇಕೆನಿಸದ ವಿರಾಗಿಯ ಭಾವ ಕಾಡತೊಡಗಿತ್ತು.